# ಸೆಕೆಂಡರಿ ಡಿಸ್‌ಮೆನೊರಿಯಾ: ಹಾಗೆಂದರೇನು?

ಋತುಚಕ್ರದ ವೇಳೆ ನೋವು ಸಾಮಾನ್ಯವಾಗಿದ್ದು, ಇದನ್ನು ಡಿಸ್‌ಮೆನೊರಿಯಾ ಅಥವಾ ಸರಳವಾಗಿ ಮುಟ್ಟಿನ ನೋವು ಎನ್ನುತ್ತಾರೆ. ಮುಟ್ಟಿನ ನೋವು ತೀವ್ರ, ಕಡಿಮೆ ಅಥವಾ ಅತಿ ಉಗ್ರವು ಆಗಿರಬಹುದು. ಇದು ವಾಕರಿಕೆಯನ್ನು ಉಂಟುಮಾಡಬಹುದು ಅಥವಾ ಅತಿಯಾದ ನೋವಿನ ಕಾರಣದಿಂದ ಮಹಿಳೆಯು ಕೆಲಸದಿಂದ ರಜೆಯನ್ನು ಪಡೆಯಬೇಕಾಗಬಹುದು. ಇದು ಮುಟ್ಟು ಶುರುವಾಗುವ ಕೆಲ ದಿನಗಳ ಮೊದಲು, ಕೆಲ ಗಂಟೆಗಳ ಮೊದಲು ಅಥವಾ ಮುಟ್ಟಿನೊಂದಿಗೂ ಕಾಣಿಸಿಕೊಳ್ಳಬಹುದು. ಸ್ರಾವವು ಕಡಿಮೆಯಾದಂತೆ ನೋವು ಕಡಿಮೆಯಾಗುತ್ತದೆ. ಆದರೆ ಈ ನೋವು ಆಂತರಿಕವಾಗಿ ಯಾವುದೇ ರೋಗ ಅಥವಾ ಸಮಸ್ಯೆಗೆ ಸಂಬಂಧಪಟ್ಟಿದ್ದಲ್ಲಿ ಅದನ್ನು ಸೆಕೆಂಡರಿ ಡಿಸ್‌ಮೆನೊರಿಯಾ (Secondary Dysmenorrhea) ಎನ್ನುತ್ತಾರೆ.



ಸೆಕೆಂಡರಿ ಡಿಸ್‌ಮೆನೊರಿಯಾಕ್ಕೆ ಸಾಮಾನ್ಯ ಕಾರಣಗಳೆಂದರೆ ಎಂಡೋಮೆಟ್ರಿಯಾಸಿಸ್, ಗರ್ಭಕೋಶದಲ್ಲಿನ ಗಡ್ಡೆಗಳು ಮತ್ತು ಲೈಂಗಿಕ ರೋಗಗಳು. ಅದರಲ್ಲೂ, ಎಂಡೊಮೆಟ್ರಿ0ಯಾಸಿಸ್ ಅತ್ಯಂತ ಗಂಭೀರ ಸಮಸ್ಯೆ0ಯಾಗಿ ಪರಿಣಮಿಸುವುದು. ಒಬ್ಬ ಮಹಿಳೆಯು ಎಂಡೋಮೆಟ್ರಿಯೋಸಿಸ್‌ಗೆ ಒಳಗಾಗಿದ್ದರೆ ಆಕೆಯ ಹೆಣ್ಣು ಮಕ್ಕಳು 8%, ಸಹೋದರಿಯರು 6%, ಸೋದರ ಸಂಬಂಧಿಗಳು ಮತ್ತು ಮೊದಲ ಹಂತದ ರಕ್ತ ಸಂಬಂಧಿಗಳು 7% ದಷ್ಟು ಎಂಡೋಮೆಟ್ರಿಯಾಸಿಸ್‌ಗೆ ಒಳಗಾಗುವ ಸಾಧ್ಯತೆಯಿರುತ್ತದೆ. ಎಂಡೋಮೆಟ್ರಿಯಾಸಿಸ್‌ಗೆ ಒಳಗಾದ ಮಹಿಳೆಯರಲ್ಲಿ 30–40 ಜನರು ಬಂಜೆತನದಿಂದ ಬಳಲುತ್ತಾರೆ. ಎಂಡೊಮೆಟ್ರಿಯಾಸಿಸ್‌ಗೆ ಒಳಗಾದವರಲ್ಲಿನ ಬಂಜೆತನದ ಪ್ರಮಾಣವು ಸಾಮಾನ್ಯ ಜನಸಂಖ್ಯೆಯಲ್ಲಿನ ಬಂಜೆತನದ ಪ್ರಮಾಣಕ್ಕಿಂತ 2 ರಿಂದ 3 ಪಟ್ಟು ಜಾಸ್ತಿಯಾಗಿದೆ.

ಎಂಡೋಮೆಟ್ರಿಯಾಸಿಸ್‌ನ ಲಕ್ಷಣಗಳು ಒಬ್ಬ ವ್ಯಕ್ತಿಯಿಂದ ಇನ್ನೊಬ್ಬ ವ್ಯಕ್ತಿಗೆ ಬೇರೆ ಬೇರೆಯಾಗಿರುತ್ತದೆ. ರೋಗದ ಗಂಭೀರತೆಗೂ ಮತ್ತು ಲಕ್ಷಣದ ಪ್ರಮಾಣಕ್ಕೂ ಯಾವುದೇ ಸಂಬಂಧ ವಿಲ್ಲದಿರಬಹುದು. ಸಾಮಾನ್ಯ ಲಕ್ಷಣಗಳೆಂದರೆ ಶ್ರೋಣಿ ಭಾಗದಲ್ಲಿ ನೋವು ಮತ್ತು ಬಂಜೆತನ. ಶ್ರೋಣಿಯ ನೋವು ಮುಟ್ಟಿನ ಅವಧಿಯಲ್ಲಿ ಅಥವಾ ಮುಟ್ಟಿಗಿಂತ ಸ್ವಲ್ಪ ಮೊದಲು ಕಾಣಿಸಿಕೊಂಡು ಋತುಚಕ್ರದ ನಂತರ ಕ್ಷೀಣಿಸಬಹುದು. ಕೆಲ ಮಹಿಳೆಯರಿಗೆ ಸಂಭೋಗದ ಸಮಯದಲ್ಲಿ, ಮಲ ಮೂತ್ರ ವಿಸರ್ಜಿಸುವಾಗಲೂ ನೋವುಂಟಾಗಬಹುದು. ಮಲ ಮೂತ್ರ ವಿಸರ್ಜನೆಯ ಸಂದರ್ಭದಲ್ಲಿ ರಕ್ತಸ್ರಾವವಾಗಬಹುದು. ಎಂಡೋಮೆಟ್ರಿಯಾಸಿಸ್ ಬೇರೆ ರೀತಿಯಲ್ಲಿ ಆರೋಗ್ಯವಂತರಾಗಿರುವ ದಂಪತಿಗಳಲ್ಲಿ ಬಂಜೆತನಕ್ಕೂ ಕಾರಣವಾಗಬಹುದು.

ಎಂಡೋಮೆಟ್ರಿಯಾಸಿಸ್ ಸಂತಾನೋತ್ಪತ್ತಿಯ ಸಾಮರ್ಥ್ಯವಿರುವ ಅವಧಿಯಲ್ಲಿ ಅಂದರೆ ಮುಟ್ಟು ಕಾಣಿಸಿಕೊಂಡಂದಿನಿಂದ ಋತುಬಂಧದ ಅವಧಿಯವರೆಗೆ ಅಥವಾ ಋತುಬಂಧವುಂಟಾದ ನಂತರದ ವರ್ಷಗಳಲ್ಲಿ ಕಾಣಿಸಿಕೊಳ್ಳಬಹುದು. ಸುಮಾರು 25–35 ವರ್ಷ ವಯಸ್ಸಿನ ಮಹಿಳೆಯರಲ್ಲಿ ಎಂಡೋಮೆಟ್ರಿಯಾಸಿಸ್ ಸಾಮಾನ್ಯವಾಗಿ ವರದಿಯಾಗುತ್ತದೆಯಾದರೂ ಇದು 11 ವರ್ಷ ವಯಸ್ಸಿನ ಎಳೆಯ ಹೆಣ್ಣು ಮಕ್ಕಳಲ್ಲಿಯೂ ಕಾಣಿಸಿಕೊಳ್ಳಬಹುದು. ಋತುಬಂಧವುಂಟಾದ ಮಹಿಳೆಯರಲ್ಲಿ ಎಂಡೋಮೆಟ್ರಿಯಾಸಿಸ್ ಅಷ್ಟಾಗಿ ಕಾಣಿಸಿಕೊಳ್ಳುವುದಿಲ್ಲ.



**ಡಾ॥ ದೇವಿಕಾ ಗುಣಶೀಲ**
**ಬಂಜೆತನ ಹಾಗೂ ಸ್ತ್ರೀರೋಗ ತಜ್ಞೆ**

**(ಲೇಖಕರು ಬಂಜೆತನ ಚಿಕಿತ್ಸೆ ಮತ್ತು ಸ್ತ್ರೀರೋಗ ಆರೈಕೆಯಲ್ಲಿ 40 ವರ್ಷಗಳ ಪರಂಪರೆ ಹೊಂದಿರುವ ಬೆಂಗಳೂರಿನ ಗುಣಶೀಲ ಫರ್ಟಿಲಿಟಿ ಕೇಂದ್ರದ ಸಂತಾನಫಲ ಚಿಕಿತ್ಸಾ ತಜ್ಞರು. ದಕ್ಷಿಣ ಭಾರತದ ಮೊದಲ ಐ.ವಿ.ಎಫ್ ಶಿಶು ಈ ಆಸ್ಪತ್ರೆಯಲ್ಲಿ ಜನಿಸಿದೆ)**

ಔಷಧಿ ಅಥವಾ ಶಸ್ತ್ರಚಿಕಿತ್ಸೆಯ ಮೂಲಕ ಎಂಡೋಮೆಟ್ರಿಯಾಸಿಸ್‌ನ್ನು ವಾಸಿಮಾಡಬಹುದು. ಔಷಧೀಯ ಚಿಕಿತ್ಸೆಯು ನೋವು ನಿವಾರಕಗಳು ಅಥವಾ ಋತುಚಕ್ರವನ್ನು ನಿಯಂತ್ರಿಸುವ ಔಷಧಗಳನ್ನೊಳಗೊಂಡಿರುತ್ತದೆ. ಸಾಮಾನ್ಯ ಅರವಳಿಕೆಯನ್ನು ನೀಡಿ ಹೊಕ್ಕಳಿನಲ್ಲಿ ಮಾಡಿದ ಛೇದದ ಮೂಲಕ ಚಿಕ್ಕ ಟೆಲಿಸ್ಕೋಪನ್ನು ಹೊಟ್ಟೆಯಲ್ಲಿ ತೂರಿಸಿ ಎಂಡೋಮೆಟ್ರಿಯಾಸಿಸ್ ಅನ್ನು ಹೊರತೆಗೆಯುವ ಲ್ಯಾಪ್ರೊಸ್ಕೊಪಿಯು ಈ ಸಮಸ್ಯೆಗೆ ಲಭ್ಯವಿರುವ ಒಂದು ಶಸ್ತ್ರ ಚಿಕಿತ್ಸಾ ವಿಧಾನವಾಗಿದೆ. ಎಂಡೋಮೆಟ್ರಿಯಾಸಿಸ್ ಚಿಕಿತ್ಸೆಯ ಉದ್ದೇಶವು ನೋವು ನಿವಾರಿಸುವುದು ಅಥವಾ ಬಂಜೆತನ ನಿವಾರಿಸುವುದಾಗಿರುತ್ತದೆ.

ಎಂಡೋಮೆಟ್ರಿಯೊಸಿಸ್‌ನ ಮಧ್ಯಮ ಮತ್ತು ಗಂಭೀರ ಸ್ಥಿತಿಗಳಲ್ಲಿ ಶ್ರೋಣಿಯಲ್ಲಾಗುವ ಗಾಯ ಅಥವಾ ಅಂಟಿಕೊಳ್ಳುವಿಕೆಯಿಂದ ಬಂಜೆತನವುಂಟಾಗಬಹುದು. ಪಾಲೊಫಿಯನ್ ಟ್ಯೂಬುಗಳು ಅಥವಾ ಅಂಡಾಶಯ ಶ್ರೋಣಿಯ ಗೋಡೆಯನ್ನು ಅಂಟಿಕೊಂಡು ಅಥವಾ ಒಂದಕ್ಕೊಂದು ಅಂಟಿಕೊಂಡು, ಸರಿದಾಡಲು ಅವಕಾಶ ವಿಲ್ಲದಂತಾಗಬಹುದು. ಎಂಡೋಮೆಟ್ರಿಯಾಸಿಸ್‌ನಿಂದ ಉಂಟಾಗುವ ಗಾಯ ಅಥವಾ ಅಂಟಿಕೊಳ್ಳುವಿಕೆಯಿಂದ ಫಾಲೊಫಿಯನ್ ನಳಿಕೆ ಮತ್ತು ಅಂಡಾಶಯಗಳು ತಮ್ಮ ಸೂಕ್ತ ಸ್ಥಳದಿಂದ ಪಲ್ಲಟಗೊಳ್ಳುವುದರಿಂದ ಮೊಟ್ಟೆಯು ಫಾಲೊಫಿಯನ್ ನಳಿಕೆಯನ್ನು ಪ್ರವೇಶಿಸುವುದು ಸಾಧ್ಯವಾಗುವುದಿಲ್ಲ. ಅಲ್ಲದೇ ಎಂಡೋಮೆಟ್ರಿಯಾಸಿಸ್ ಫಾಲೊಫಿಯನ್ ನಳಿಕೆಯಲ್ಲಿ ತಡೆ ಅಥವಾ ಇನ್ನಿತರ ಹಾನಿಯನ್ನುಂಟು ಮಾಡುವುದರಿಂದ ಮೊಟ್ಟೆಯು ಫಾಲೊಫಿಯನ್ ನಳಿಕೆಯಿಂದ ಗರ್ಭಾಶಯಕ್ಕೆ ಚಲಿಸುವುದು ಅಸಾಧ್ಯವಾಗುತ್ತದೆ. ಎಂಡೋಮೆಟ್ರಿಯಾಸಿಸ್‌ಗೆ ತುತ್ತಾಗಿರುವ ಮಹಿಳೆಯರಲ್ಲಿ ಪ್ರನಾಳ ಶಿಶು ಚಿಕಿತ್ಸೆಯು ಬಂಜೆತನ ನಿವಾರಿಸುವಲ್ಲಿ ಪರಿಣಾಮಕಾರಿಯೆನಿಸಿದೆ. ಪ್ರನಾಳ ಶಿಶು ವಿಧಾನದಲ್ಲಿ ವೀರ್ಯಾಣು ಮತ್ತು ಅಂಡಾಣುಗಳನ್ನು ಪ್ರಯೋಗ ಶಾಲೆಯಲ್ಲಿ ಫಲಿತಗೊಳಿಸಿ ಅದರಿಂದ ಉದ್ಭವಿಸುವ ಭ್ರೂಣವನ್ನು ಗರ್ಭಾಶಯಕ್ಕೆ ಸೇರಿಸುವುದು ಸಾಧ್ಯವಿದೆ. ಎಂಡೋಮೆಟ್ರಿಯಾಸಿಸ್‌ಗೆ ಲ್ಯಾಪ್ರೊಸ್ಕೊಪಿ ಚಿಕಿತ್ಸೆಯನ್ನು ಪಡೆದ ನಂತರ 6 ರಿಂದ 9 ತಿಂಗಳಲ್ಲಿ ಮಹಿಳೆಯರು ಗರ್ಭಧರಿಸುವ ಸಾಧ್ಯತೆಯಿರುತ್ತದೆ. ಕೆಲವು ನಿರ್ದಿಷ್ಟ ಚಿಕಿತ್ಸಾ ವಿಧಾನದ ನಂತರ ಪ್ರನಾಳ ಶಿಶು ಚಿಕಿತ್ಸೆಯ ಮೂಲಕ ಗರ್ಭಧರಿಸುವ ಸಾಧ್ಯತೆಯು 40–50% ಇರುತ್ತದೆ.

**ಲೇಖಕರ ದೂರವಾಣಿ: 080–26673585.**

GUNASHEELA
Fertility Centre
**ಗುಣಶೀಲ ಫರ್ಟಿಲಿಟಿ ಸೆಂಟರ್**
**ಬಸವನಗುಡಿ, ಬೆಂಗಳೂರು,**
**ಫೋ: (080) 41312600/ 266735858**
**ಶಾಖೆ: ಕೋರಮಂಗಲ: ಫೋ: (080) 41712600**